ಇವತ್ತು ಅವಳು ಕೂದಲು ಬಾಚಿಕೊಂಡು ಮುಡಿಕಟ್ಟಿಕೊಂಡು ಕೂತಿರುತ್ತಾಳೆ. ಜಾಜಿಯ ಹೂಮಾಲೆ ಮುಡಿದು ಸಂಭ್ರಮಿಸುತ್ತಾಳೆ. ಇವತ್ತು ಅವಳು ಬಿಳಿ ಸೀರೆ ಉಡುತ್ತಾಳೆ. ಆಗ ನಾನು 'ಇಂಥ ಸೂತಕದ ಸೀರೆ ಯಾಕೆ ಉಟ್ಟೇ?' ಎಂದು ಕೇಳಿದರೆ ಅವಳು ನಾಲ್ಕೈದು ಸೀರೆ ತಂದು ನನ್ನ ಮುಂದೆ ಹರಡಿ 'ಯಾವ ಸೀರೆ ಉಡಲಿ ಹೇಳಿ' ಎಂದು ಕೇಳುತ್ತಾಳೆ. 'ನೀನು ಗುಲಾಬಿ ಸೀರೆ ಧರಿಸು' ಎಂದು ನನ್ನ ಬಾಯಿಯಿಂದ ಶಬ್ದ ಹೊರಡುವುದರಲ್ಲಿ ಅವಳು ಸೀರೆ ಬದಲಿಸಲು ಕೋಣೆಗೆ ಧಾವಿಸುತ್ತಾಳೆ.

'ಇವತ್ತು ಎಲ್ಲಿ ಹೋಗ್‌ಬೇಕೆಂತಿದ್ದೀ' ಎಂದು ನಾನು ಕೇಳಿದರೆ 'ಈಗ ಎಲ್ಲಿ ಹೋಗೋಕಾಗತ್ತೆ... ರಾತ್ರೆಯಾಯ್ತಲ್ಲ' ಅಂತಾಳೆ.

ಆಗ ನಾನು ಅವಳನ್ನು ಒತ್ತಾಯಿಸುತ್ತೇನೆ. ನಾವಿಬ್ಬರೂ ಪೇಟೆಗೆ ಹೋಗುತ್ತೇವೆ. ಮಗುವಿನ ಡ್ರೆಸ್, ಆಟದ ಸಾಮಾನುಗಳನ್ನು ನೋಡುತ್ತ ರೇವತಿ ಮೈಮರೆತುಬಿಡುತ್ತಾಳೆ. 'ಅಲ್ನೋಡಿ ಆ ಶುಭ್ರ ಬಿಳಿಯ ಡ್ರೆಸ್ ನಾವು ತಗೊಳ್ಳೋಣವೆ?'

'ಯಾರಿಗೆ?' ಎಂದು ಕೇಳುವ ಧೈರ್ಯ ನನ್ನಲ್ಲಿರುವುದಿಲ್ಲ. ನಾನು ತಲೆಯಲ್ಲಾಡಿಸಿ 'ಹಾಂ' ಅಂತೇನೆ ಮತ್ತು ಆ ಬಾಬಾಸೂಟ್, ಆ ಬಾಬಾ ಗಾಡಿ... ಆ ಗೊಂಬೆಗಳು...

ನನ್ನಿಂದ ತಡೆಯಲಾಗದೆ ನಾನು ನಗುತ್ತೇನೆ. ನನ್ನ ನಗು ಅವಳನ್ನು ಮುಳ್ಳಿನಂತೆ ಘಾತಿಸುತ್ತದೆ. ಯಾವ ಹೆಣ್ಣಿಗೆ ಮಕ್ಕಳ ಬಯಕೆಯಿರುವುದಿಲ್ಲ? ಅದರಲ್ಲಿ ರೇವತಿಯ ಅಪರಾಧವೇನೂ ಇಲ್ಲ. ಆದರೆ ನಗುವುದು ಅವಳನ್ನು ಚಾಳಿಸಲು ಎಂದು ಅವಳಿಗೆ ಅನ್ನಿಸಬಹುದು. ಬಳಿಕ ನಾವಿಬ್ಬರೂ ಮೌನವಾಗಿ ಮನೆ ಸೇರುತ್ತೇವೆ. ಅವಳಿಗೆ ಐಸ್‌ಕ್ರೀಮ್ ಹಿಡಿಸುತ್ತದೆಯೆಂದು ನಾನು ಅವಳಿಗೆ 'ಐಸ್‌ಕ್ರೀಂ ತಿಂತೀಯಾ?' ಎಂದು ಕೇಳಿದರೆ 'ಈಗ ಬೇಡ' ಎಂದು ಅವಳು ಉತ್ತರಿಸಿಯಾಳು. ರೇವತಿ 'ಐಸ್‌ಕ್ರೀಂ ಬೇಡ' ಅಂತಂದರೆ ಅವಳ ಮನಸ್ಸು ಮುದುಡಿಕೊಂಡಿದೆಯೆಂದರ್ಥ.

ರಾತ್ರಿ ದೀಪ ಆರಿಸಿದಾಗ ರೇವತಿಗೆ ಅಂಜಿಕೆ ಆವರಿಸುತ್ತದೆ. ಕತ್ತಲಲ್ಲಿ ಅವಳಿಗೆ ಆಕೃತಿಗಳು ಕಾಣುತ್ತವೆ. ಅವಳು ಕಳ್ಳರಿಗೆ ಅಂಜುವಂತೆ ಹಾವು ಹುಳಗಳಿಗೂ ಅಂಜುತ್ತಾಳೆ. ಹಲ್ಲಿ ಮತ್ತು ಜಿರಳೆ ಕಂಡರೂ ಮೈದೆಗೆಯುತ್ತಾಳೆ. ಆದರೆ ಕತ್ತಲಾದ ನಂತರ ಅವಳಿಗೆ ಭೂತಪ್ರೇತಗಳ ಭಯ ಕಾಡುತ್ತದೆ. ಅವಳಿಗೆ ಮೈಚಳಿಯುಂಟಾಗುತ್ತದೆ. ಆ ಚಳಿಗೆ ಎರಡು ಕಂಬಳಿ ಹೊದ್ದರೂ ಸಾಲದು. ಆಗ ನಾನು ಎದ್ದು ದೀಪ ಹಚ್ಚಬೇಕಾಗುತ್ತದೆ. ಬಿಸಿ ಬಿಸಿ ಕಾಫಿ ಮಾಡಿ ತರುತ್ತೇನೆ ಎಂದು ಹೇಳಿದರೆ ಅವಳು ಬೇಡ ಎನ್ನುತ್ತಾಳೆ. 'ನೀವು ಇಲ್ಲೇ ಇರಿ, ನನಗೆ ಅಂಜಿಕೆಯಾಗುತ್ತದೆ' ಅನ್ನುತ್ತಾಳೆ. ನಾನು ಅವಳಿಗೆ ಕಂಬಳಿ ಸುತ್ತಿ ಅಡಿಗೆ ಮನೆಗೆ ಒಯ್ಯುತ್ತೇನೆ, ಗ್ಯಾಸ್ ಹಚ್ಚಿ ಕಾಫಿ ಮಾಡುತ್ತೇನೆ. ಆ ಬಿಸಿ ಬಿಸಿ ಉಗಿಬರುವ ಕಾಫಿಯನ್ನು ಅವಳು ಗಟಗಟ ಕುಡಿಯುತ್ತಾಳೆ. ಆಗ ಅವಳು ಸುಧಾರಿಸಿಕೊಂಡು 'ಪರವಾಗಿಲ್ಲ ಈಗ ಕೊಂಚ ವಾಸಿ' ಎನ್ನುತ್ತಾಳೆ. 'ನಾನು ನಿದ್ದೆಗೆ ಜಾರಿದ ಮೇಲೆ ನೀವು ಮಲಗಿ, ದೀಪ ಆರಿಸಬೇಡಿ' ಅನ್ನುತ್ತಾಳೆ.

ಬೆಳಿಗ್ಗೆ ಎಂದಿನಂತೆ ಎದ್ದು ಕೂಡುತ್ತಾಳೆ. ಹಿಂದಿನ ರಾತ್ರಿ ಏನೂ ಘಟಿಸದಿರುವಂತೆ ಬಂದು ಕಿಟಿಕಿಯ ಬಾಗಿಲುಗಳನ್ನು ತೆರೆಯುತ್ತಾಳೆ. ಚಹ ತಣ್ಣಗಾಗಬಹುದೆಂದು ನನ್ನನ್ನು ಎಬ್ಬಿಸುತ್ತಾಳೆ.

ಮನೆಯಿಂದಾಚೆ ಹೋಗುವಾಗ, 'ನನಗೆ ಆಫೀಸಿನಿಂದ ಬರಲು ತಡವಾಗಬಹುದು. ನಿನಗೆ ಒಬ್ಬಳೇ ಇರಲು ಭಯವೆನಿಸಿದರೆ ಪಕ್ಕದ ಮನೆಗೆ ಹೋಗಿ ಕೂಡು'.

ರೇವತಿ ಮಾತನಾಡುವುದಿಲ್ಲ. ಮುಗುಳು ನಗುತ್ತಾಳೆ. ನಾನು ಮೆಟ್ಟಿಲುಗಳನ್ನು ಇಳಿಯುತ್ತಿದ್ದಂತೆ, 'ನನ್ನ ಬಗ್ಗೆ ಕಾಳಜಿ ಬೇಡ. ನನಗೆ ಯಾವ ಭಯವೂ ಇಲ್ಲ' ಅನ್ನುತ್ತಾಳೆ.

ನಮ್ಮ ಮನೆಯ ಹಿಂಬದಿ ಮಧು ವಾಸ ಮಾಡುತ್ತಾನೆ. ಮಧು ಮತ್ತು ಹೆಂಡತಿ ಜೊತೆಗೆ ಮನೆ